ಗೃಹ ರಕ್ಷಕ ಸಿಬ್ಬಂದಿಯವರ ಬೇಡಿಕೆಗಳು

27 (80)

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ)

ಅ) ರಾಜ್ಯದಲ್ಲಿರುವ ಗೃಹರಕ್ಷಕ ಸಿಬ್ಬಂದಿಯ ಸಂಖ್ಯೆ ಎಷ್ಟು?

ಆ) ಪ್ರಸ್ತುತ ಅವರಿಗೆ ನೀಡುತ್ತಿರುವ ಮಾಶಾಸನ ಎಷ್ಟು?

ಇ) ಸದರಿಯವರಿಗೆ ನ್ಯಾಯಬದ್ಧವಾದ ಕನಿಷ್ಠ ವೇತನವನ್ನಾದರೂ ಸರ್ಕಾರ ಕೊಡಬಹುದೇ?

ಶ್ರೀ ಆರ್. ಅಶೋಕ್

(ಉಪ ಮುಖ್ಯ ಮಂತ್ರಿಗಳು ಹಾಗೂ ಗೃಹ ಮತ್ತು ಸಾರಿಗೆ ಸಚಿವರು)

ಅ) ಪ್ರಸ್ತುತ ರಾಜ್ಯದಲ್ಲಿ ಒಟ್ಟು 21,000 ಗೃಹರಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ರಾಜ್ಯದಲ್ಲಿ ಗೃಹರಕ್ಷಕ ಸಂಸ್ಥೆಯು ಮೂಲತಃ ಒಂದು ಸ್ವಯಂ ಸೇವಕ ಸಂಸ್ಥೆಯಾಗಿದೆ. ಗೃಹರಕ್ಷಕರುಗಳಿಗೆ ಪ್ರಸ್ತುತ ಯಾವುದೇ ಮಾಶಾಸನವನ್ನು ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. ಆದರೆ, ಗೃಹರಕ್ಷಕ ಸದಸ್ಯರುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1. ಬೆಂಗಳೂರು ನಗರದಲ್ಲಿ ಕರ್ತವ್ಯ/ ತರಬೇತಿ ಭತ್ಯೆ ರೂ.200/– ದಿನವೊಂದಕ್ಕೆ ಒಬ್ಬರಿಗೆ ಕರ್ತವ್ಯ/ ತರಬೇತಿಗೆ ಕರೆದ ಸಂದರ್ಭದಲ್ಲಿ ಮತ್ತು ರಾಜ್ಯದ ಇತರೆ ಜಿಲ್ಲೆಗಳಲ್ಲಿ ರೂ.175/–ಗಳನ್ನು ನೀಡಲಾಗುತ್ತಿದೆ.

2. ಕವಾಯತು ಭತ್ಯೆ – ರೂ. 22.50/– ಯನ್ನು ಪ್ರತಿಯೊಬ್ಬ ಸದಸ್ಯರಿಗೆ ಕವಾಯತಿಗೆ ಹಾಜರಾದಾಗ ನೀಡಲಾಗುತ್ತದೆ.

3. ಪ್ರಯಾಣ ಭತ್ಯೆ – ನಿಯಮಾವಳಿ ರೀತಿ ಅನ್ವಯವಾಗುವ ದರದಲ್ಲಿ ಕರ್ತವ್ಯ/ ತರಬೇತಿಗೆ ನಿಯೋಜಿಸಿದಾಗ ನೀಡಲಾಗುತ್ತದೆ.

4. ಗೃಹರಕ್ಷಕರ ಕರ್ತವ್ಯ/ತರಬೇತಿಯ ಸಂದರ್ಭಗಳಲ್ಲಿ ಗಾಯಗೊಂಡಾಗ ರೂ.10,000/– ದವರೆಗೆ ಎಕ್ಸ್‌ಗ್ರೇಷಿಯವನ್ನು ಹಾಗೂ ನಿಧನರಾದಲ್ಲಿ ರೂ.1,00,000/– ಪರಿಹಾರ ಧನ ನೀಡಲಾಗುತ್ತಿದೆ.

5. ಗೃಹರಕ್ಷಕರ ಕಲ್ಯಾಣ ನಿಧಿಯಿಂದ ವೈದ್ಯಕೀಯ ವೆಚ್ಚ/ಮಕ್ಕಳ ಉನ್ನತ ವಿದ್ಯಾಭ್ಯಾಸ ಇತ್ಯಾದಿಗಳಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ.

6. ಮರಣ ಹೊಂದಿದ ಗೃಹರಕ್ಷಕರ ಅಂತ್ಯ ಸಂಸ್ಕಾರಕ್ಕೆ ರೂ.7,000/– ನೆರವನ್ನು ಗೃಹರಕ್ಷಕ ನಿಧಿಯಿಂದ ನೀಡಲಾಗುತ್ತಿದೆ.

7. ಉತ್ತಮ ಸೇವೆ ಸಲ್ಲಿಸಿದ ಸದಸ್ಯರಿಗೆ ನಗದು ಬಹುಮಾನ / ರಾಷ್ಟ್ರಪತಿ ಪದಕ / ಮಾನ್ಯ ಮುಖ್ಯಮಂತ್ರಿಗಳ ಪದಕ ನೀಡಲಾಗುತ್ತಿದೆ.

ಇ) ಕರ್ನಾಟಕ ಗೃಹರಕ್ಷಕ ಕಾಯ್ದೆ ಹಾಗೂ ನಿಯಮಗಳ ಅನ್ವಯ ಸ್ವಯಂ ಸೇವಕ ಗೃಹರಕ್ಷಕರಿಗೆ ಕನಿಷ್ಠ ಮಾಸಿಕ ವೇತನವನ್ನು ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಶ್ರೀ ಶ್ರೀಕಾಂತ್ ಸುಬ್ರಾವ್ ಕುಲಕರ್ಣಿ (ಜಮಖಂಡಿ) :– ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಏನು ಉತ್ತರವನ್ನು ಕೊಟ್ಟಿದ್ದಾರೆ? ರಾಜ್ಯದಲ್ಲಿರುವಂತಹ 21,000 Home Guards ಬಗ್ಗೆ ಪ್ರಶ್ನೆ ಕೇಳಿದ್ದೆ. ಅವರ ನಿತ್ಯದ ಕಷ್ಟಸುಖಗಳ ಬಗ್ಗೆ ಸರ್ಕಾರ ಯೋಚನೆ ಮಾಡುವುದು ಬಹಳ ಅಗತ್ಯವೆಂದು ನನಗನಿಸುತ್ತದೆ. ಏಕೆಂದರೆ ಇವತ್ತು 21,000 Home Guards ಗೆ ಯಾವುದೇ ರೀತಿಯ ಮಾಸಿಕ ಗೌರವ ಧನವನ್ನು ಸರ್ಕಾರ ಕೊಡುವಂಥ ಯೋಜನೆ ಇಲ್ಲ. ಪ್ರತಿ ದಿವಸ ಯಾವತ್ತಾದರೂ ಅವರು ಕರ್ತವ್ಯಕ್ಕೆ ಬಂದಾಗ 170 ರೂಪಾಯಿ ಕೊಟ್ಟರೆ ಅವರು ಹೇಗೆ ಬದುಕಬೇಕು? ಮಾನ್ಯ ಮಂತ್ರಿಗಳು ಕೊಟ್ಟಂಥ ಉತ್ತರದಲ್ಲಿ ಅವರಿಗೆ ಕರ್ತವ್ಯದಲ್ಲಿದ್ದಾಗ ಏನಾದರೂ ಹೆಚ್ಚು ಕಡಿಮೆ ಆದರೆ ಸುಮಾರು ರೂ.10,000 ವರೆಗೆ Medical charges ಕೊಡಬೇಕೆಂದು ಹೇಳಿದ್ದಾರೆ. ಅವರು ಆಕಸ್ಮಾತ್ ತೀರಿಕೊಂಡರೆ ಅವರ familyಗೆ 1 ಲಕ್ಷ ರೂಪಾಯಿ ex-gratia ದುಡ್ಡು ಕೊಡುವ ಬಗ್ಗೆ ಹೇಳಿದ್ದಾರೆ. ಅವರು ಏನಾದರೂ ತೀರಿಕೊಂಡರೆ ಅವರ ಅಂತ್ಯಕ್ರಿಯೆಗೆ ರೂ. 7,000 ಕೊಡುತ್ತೇವೆಂದು ಹೇಳಿದ್ದಾರೆ. ಇದೆಲ್ಲಾ ಸರ್ಕಾರ ಸತ್ತಮೇಲೆ ಕೊಡುವುದು. ಆದರೆ ಅವರು ಜೀವಂತ ಇದ್ದಾಗ, ಅವರ ಪರಿವಾರ ಹೆಂಡತಿ ಮಕ್ಕಳು ಬದುಕಬೇಕಾಗಿದೆ. ಹೀಗಾಗಿ ನನ್ನ ವಿನಂತಿ ಏನೆಂದರೆ ಮಾನ್ಯ ಮಂತ್ರಿಗಳಲ್ಲಿ ಮಾನ್ಯ ಅಧ್ಯಕ್ಷರೆ, ಕನಿಷ್ಠ ಪ್ರತಿ ತಿಂಗಳು ರೂ. 5,000 ಗೌರವಧನ ಕೊಡುತ್ತೇವೆಂದು ಘೋಷಣೆ ಮಾಡಿದರೆ ಅನೇಕ ಕರ್ತವ್ಯಗಳು ಅಂದರೆ ನಿಷ್ಕಾಮ ಕರ್ಮ ಎಂದು ಕರೆಯುತ್ತೀರಿ. ಈ ನಿಷ್ಕಾಮ ಸೇವಾ ಎನ್ನತಕ್ಕಂಥದ್ದನ್ನು ತೆಗೆದುಹಾಕಿ ಅವರ ಪರಿಶ್ರಮಕ್ಕೆ ತಕ್ಕ ಪ್ರತಿಫಲ ಕೊಡಬೇಕೆನ್ನುವಂಥ ಹಿನ್ನೆಲೆಯಲ್ಲಿ ನಾನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು):– ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ನಮ್ಮ ಗೌರವಯುತ ಶಾಸಕರಾದಂಥ ಶ್ರೀಕಾಂತ್‌ರವರು ಗೃಹ ರಕ್ಷಕ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ರಾಜ್ಯದಲ್ಲಿ ಗೃಹ ರಕ್ಷಕದ ಸಂಖ್ಯೆ 21 ಸಾವಿರ ಇದೆ ಎಂದು ಹೇಳಿದ್ದೇವೆ. ಅವರಿಗೆ ಮಾಸಾಶನ ಕೊಡಬೇಕೆಂದು ಹೇಳಿದ್ದಾರೆ. ಅದು ನಮ್ಮ ರೂಲ್ಸ್ ನಲ್ಲಿ ಬರುವುದಿಲ್ಲ. ಅದು ಒಂದು ಗೌರವಯುತ ಸಂಸ್ಥೆ. ನಮ್ಮ ಸರ್ಕಾರದ ನಿಯಮಗಳ ಪ್ರಕಾರ ಸ್ವಯಂಸೇವಾ ಸಂಸ್ಥೆಗಳಿಗೆ ಮಾಸಿಕ ವೇತನ ನೀಡಲು ಅವಕಾಶ ಇರುವುದಿಲ್ಲ. ಆದರೆ ಅವರಿಗೆ ಬೇರೆ ರೀತಿಯಲ್ಲಿ ಭತ್ಯವನ್ನು ಕೊಡಬಹುದು. ಈಗ 200 ರೂಪಾಯಿ ಇದೆ ಬೆಂಗಳೂರಿನಲ್ಲಿ, ಇತರೆ ಜಿಲ್ಲೆಗಳಲ್ಲಿ ರೂ. 175 ಇದೆ. ಟ್ರೈನಿಂಗ್ ಭತ್ಯೆ 22.50 ಪೈಸೆ ಇದೆ.

ಮಾನ್ಯ ಕುಲಕರ್ಣಿಯವರ ಪ್ರಶ್ನೆ ಏನೆಂದರೆ ಈಗ ಕೊಡುತ್ತಿರುವುದು ಸಾಕಾಗುತ್ತಿಲ್ಲ, ಇನ್ನೂ ಸ್ವಲ್ಪ ಜಾಸ್ತಿ ಮಾಡಿ ಎಂದು ಕೇಳುತ್ತಿದ್ದಾರೆ. ಇನ್ನು ಮುಂದೆ ಬೆಂಗಳೂರಿನಲ್ಲಿ ಇರುವಂಥವರಿಗೆ ರೂ.300/– ಕೊಡಬೇಕು ಎನ್ನುವುದು, ಇತರ ಜಿಲ್ಲೆಗಳವರಿಗೆ ರೂ.250/– ಅಂದರೆ ರೂ.100/– ಜಾಸ್ತಿ ಮಾಡುವುದಕ್ಕೆ ಸರ್ಕಾರದ ಹಂತದಲ್ಲಿ ಪರಿಶೀಲನೆ ಮಾಡುತ್ತಿದ್ದೇವೆ. ಅದನ್ನು ಕೊಡಬೇಕೆನ್ನುವ ವಿನಂತಿಯನ್ನು, ಅದೇ ರೀತಿ ರೂ.22/– ಕೊಡುವುದನ್ನು ರೂ.75/–ಕ್ಕೆ ಏರಿಸಬೇಕೆಂಬ ಚಿಂತನೆ ಸರ್ಕಾರದ ಮುಂದಿದೆ. ಈ ಎರಡೂ ವಿಷಯವನ್ನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ದಯವಿಟ್ಟು ಬಜೆಟ್‌ನಲ್ಲಿ ಇದನ್ನು ನೀವು ಗಮನಕ್ಕೆ ತೆಗೆದುಕೊಂಡು ಸಹಾಯ ಮಾಡಬೇಕೆಂದು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ತಾತ್ವಿಕವಾಗಿ ಒಪ್ಪಿ ಜಾಸ್ತಿನೇ ಮಾಡುತ್ತಿರುವುದು.

ಅಧ್ಯಕ್ಷರು:– ರೂ. 100/– ಜಾಸ್ತಿ ಮಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಆರ್.ಅಶೋಕ್:– ಇದು ಅವರಿಗೆ ಸಂಬಳ ಅಲ್ಲ ಕೊಡುತ್ತಿರುವುದು.

ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:– ಒಂದು ವಾರಕ್ಕೆ ಪೆರೇಡ್‌ಗೆ ಹೋದಾಗ ನೀವು 22 ರೂಪಾಯಿ 50 ಪೈಸೆ ಕೊಟ್ಟರೆ ಈ ಬೆಲೆ ಏರಿಕೆ ದಿವಸಗಳಲ್ಲಿ ಬದುಕುವುದು ಹೇಗೆ? ಡ್ಯೂಟಿಗೆ ಹೋದಾಗ ಕನಿಷ್ಠ ರೂ.500/– ಗಳನ್ನಾದರೂ ಸರ್ಕಾರ ಕೊಡಬೇಕು. ಸಾಧ್ಯವಿದ್ದರೆ ಈ ಕಾನೂನಿನಲ್ಲಿ ಬದಲಾವಣೆ ತಂದು ನಿಷ್ಕಾಮ ಸೇವೆ ಎನ್ನುವ ಪದವನ್ನು ತೆಗೆದುಹಾಕಿ ಗೌರವಾನ್ವಿತವಾಗಿ ಅವರು ಬದುಕುವ ಹಾಗೆ, ಕನಿಷ್ಠ ಜೀವನ ಮಾಡುವ ಹಾಗೆ

ಅವರಿಗೆ ಹಣವನ್ನು ಕೊಡುವ ವ್ಯವಸ್ಥೆ ಮಾಡಿಕೊಡಬೇಕೆಂದು ಸನ್ಮಾನ್ಯ ಮಂತ್ರಿಗಳಲ್ಲಿ ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ಅಶೋಕ್: ಸನ್ಮಾನ್ಯ ಅಧ್ಯಕ್ಷರೆ, ಇದನ್ನು ಪರಿಶೀಲನೆ ಮಾಡುತ್ತೇವೆ. ಈಗಾಗಲೇ ಅವರಿಗೆ ಬೇರೆ ಬೇರೆ facilityಯನ್ನು ಕೊಟ್ಟಿದ್ದೇವೆ. ಅವರು ಗಾಯಗೊಂಡರೆ ಅಂಥ ಸಂದರ್ಭದಲ್ಲಿ ರೂ.10,000/– ಕೊಡುವಂಥದ್ದು, ಅಕಸ್ಮಾತ ನಿಧನರಾದರೆ ರೂ.1 ಲಕ್ಷ ಕೊಡುವುದು ಇತ್ಯಾದಿ ಇದೆ. ಇನ್ನೂ ಜಾಸ್ತಿ ಮಾಡಿ ಎಂದು ಹೇಳಿ ಸದಸ್ಯರ ಮನವಿಯಿದೆ. ನಾವು ಪರಿಶೀಲನೆ ಮಾಡುತ್ತೇವೆ. ಈಗ ಇಷ್ಟಕ್ಕೆ ನಮ್ಮ ಇಲಾಖೆ proposal ಮಾಡಿದೆ. ಮುಂದೆ ಅದನ್ನು ಪರಿಶೀಲನೆ ಮಾಡಿ ಹೆಚ್ಚು ಮಾಡುವುದಕ್ಕೆ ಕ್ರಮತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– ನರೇಂದ್ರ ಸ್ವಾಮಿಯವರು

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಹೊಸ ಪಡಿತರ ಚೀಟಿ

29 : (58)

ಶ್ರೀ ಕೃಷ್ಣಪ್ಪ ಎಂ.ಟಿ.(ತುರುವೇಕೆರೆ)

ಅ) ರಾಜ್ಯದಲ್ಲಿ ಹೊಸ ಪಡಿತರ ಚೀಟಿಯನ್ನು ವಿತರಣೆಮಾಡುವ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿ ಕೊಂಡಿದೆಯೇ,

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಪೂರ್ಣ ವಿವರ ನೀಡುವುದು)?

ಶ್ರೀ ಡಿ.ಎನ್. ಜೀವರಾಜ್ (ಮಾನ್ಯ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಹೌದು.

Yes

ಆ) ರಾಜ್ಯದಲ್ಲಿ ಇಲ್ಲಿಯವರೆಗೆ ಒಟ್ಟು 31.09 ಲಕ್ಷ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸಲಾಗಿದೆ. ಅವುಗಳ ಪೈಕಿ ದಿನಾಂಕ:04.02.2013ರ ವರೆಗೆ 8.05ಲಕ್ಷ ಪಡಿತರ ಚೀಟಿಗಳನ್ನು ನೀಡಲಾಗಿದೆ. 3.8 ಲಕ್ಷ ಪಡಿತರ ಚೀಟಿಗಳು ನೀಡಲು ಸಿದ್ಧವಾಗಿದ್ದು, ಅರ್ಜಿದಾರರು ಬಂದು ಸ್ವೀಕರಿಸ ಬೇಕಾಗಿದೆ. ಸುಮಾರು 51,000 ಅರ್ಜಿಗಳು ವಿವಿಧ ಹಂತದಲ್ಲಿ ಪರಿಶೀಲನೆಯಲ್ಲಿ ಇದ್ದು,